## ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶಿರಾ.

## ಸಿ.ಸಿ. ಸಂಖ್ಯೆಃ 187/2026

| | | | |
|---|---|---|---|
| **ದಿನಾಂಕಃ 03.06.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು. | | | |
| ಸಿಡಬ್ಲ್ಯೂಃ | 3 | ಪಿಡಬ್ಲ್ಯೂಃ | 5 |
| ಹೆಸರು | ವೆಂಕಟೇಶ್ ಪ್ರಸಾದ್ ಉರುಫ್ ಪ್ರಸಾದ್ | | |
| ತಂದೆ / ಗಂಡನ ಹೆಸರು | ವೆಂಕಟೇಶ್ | | |
| ವಯಸ್ಸು | 25 | | |
| ಉದ್ಯೋಗ | ಕೂಲಿ | | |
| ವಾಸ | ಮದ್ದಕನಹಳ್ಳಿ | | |

### ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದಃ

ಚಾಸಾ.1-2 ನನ್ನ ತಂದೆ-ತಾಯಿ, ಚಾಸಾ.4-5 ಚಿಕ್ಕಪ್ಪ-ಚಿಕ್ಕಮ್ಮ, ಚಾಸಾ.6 ನನ್ನ ಅಜ್ಜಿ. ಆರೋಪಿತರು ಸಂಬಂಧಿಕರಾಗಿರುತ್ತಾರೆ.

2. ಆರೋಪಿತರು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿರುವುದಿಲ್ಲ, ದೊಣ್ಣೆಯಿಂದ ಸಹ ಹೊಡೆದಿರುವುದಿಲ್ಲ, ಆರೋಪಿಗಳಿಂದ ನನಗೆ ಯಾವುದೇ ತೊಂದರೆ ಆಗಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಎಪಿಪಿ ರವರು ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

### ಪಾಟೀ ಸವಾಲುಃ ಎ ಪಿ ಪಿ ರವರಿಂದಃ

ದಿಃ12-03-2025 ರಂದು ಮಧ್ಯಾಹ್ನ ಸಮಯದಲ್ಲಿ ನಾನು, ಚಾಸಾ 1, 2, 4 ರಿಂದ 6 ರವರು ಮನೆಯ ಹೋರಗಡೆ ಬಂದು ಆರೋಪಿಗಳು ಸ್ವಚ್ಛ ಮಾಡುತ್ತಿರುವಾಗ ನಾವುಗಳು ಅವರನ್ನು ಬೈಯುತ್ತಿರುತ್ತಾರೆ ಎಂದು ಕೇಳಿದಕ್ಕೆ ಆರೋಪಿಗಳು ಚಾಸಾ 7 ರವರನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗಳು ನನಗೂ ಮತ್ತು ಚಾಸಾ 2, 4 ರಿಂದ 6 ರವರೆಗೆ

ಕೈಯಿಂದ ಹೊಡೆದು ಕಾಲಿನಿಂದ ಒದ್ದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ 6 ರವರಿಗೆ ದೊಣ್ಣೆಯಿಂದ 2 ಕಾಲಿಗೆ ಹಲ್ಲೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಆರೋಪಿಗಳು ನನಗೆ ಮತ್ತು ಚಾಸಾ 1, 2, 4 ರಿಂದ 6 ರವರಿಗೆ ನಮ್ಮ ತಂಟೆಗೆ ಬಂದರೆ ಸುಮ್ಮನೆ ಬಿಡುವುದಿಲ್ಲ ಕೊಚ್ಚಿ ಹಾಕುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆಯನ್ನು ಚಾಸಾ 7 ಮತ್ತು 8 ರವರು ನೋಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿತರ ಜೊತೆ ರಾಜಿ ಮಾಡಿಕೊಂಡು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

ಮರುವಿಚಾರಣೆ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.